ದೀಪಾವಳಿಯ ಸಂಜೆ ನನ್ನಂತೆ ಗಿಡಗಳ ಹುಚ್ಚಿನ ಕಡೆಯ ಮನೆಯಾಕೆ ಸಿಹಿ ಕೊಡಲು ಬಂದವರು, ಶುಭಾಶಯ ಹಾರೈಸಿದರು. ಎಂದಿನಂತೆ ಗಿಡಗಳ ಕುರಿತು ನಾಲ್ಕಾರು ಮಾತುಕತೆಯಾಯಿತು, ಆಕೆ ಹೊರಗೆ ಆಕಾಶಬುಟ್ಟಿ ಹಾಕಲು ತಾವು ಪಟ್ಟ ಪಾಡನ್ನು ಹೇಳಿಕೊಂಡರು. ನನಗೆ ನೋಡುವ ಕುತೂಹಲವಾಗಿ, ಆಕೆಯೊಂದಿಗೆ ಹೊರಟೆ. ಮಧ್ಯೆ ಸಿಕ್ಕ ಇನ್ನೊಂದು ಮನೆಯಾಕೆಯೊಂದಿಗೆ ಅಲ್ಲಿಯೇ ನಿಂತು ಮಾತಾಡಿದೆವು, ಈ ಮನೆಯಾಕೆ ನಮಗಿಬ್ಬರಿಂತ ಸ್ವಲ್ಪ ಹೆಚ್ಚು ವಯಸ್ಸಾದವರು. 'ಅರಿಸಿನ, ಕುಂಕುಮ ಆದ್ರೂ ತೆಗೆದುಕೊಂಡು ಹೋಗಿ, ಬನ್ನಿ, ಕಜ್ಜಾಯ ಆದ್ರೂ ತಿನ್ನಿ' ಎಂದೆಲ್ಲ ಒತ್ತಾಯಿಸಿದರು, ಸರಿ, ನಾವಿಬ್ಬರೂ ಒಳಗೆ ಹೋದೆವು. ಪೂಜೆ ಮಾಡಿದ್ದನ್ನು, ಮೊರದ ಬಾಗಿನ ಕೊಡುವುದನ್ನು ಈಕೆ ಸವಿಸ್ತಾರವಾಗಿ ವರ್ಣಿಸುತ್ತ, ತಟ್ಟೆಯಲ್ಲಿ ಹೂ, ಅರಿಸಿನ ಕುಂಕುಮ ಜೋಡಿಸಿಕೊಂಡು ಬಂದರು. ಮೊದಲು ಕೂತಿದ್ದ ಕಡೆಯ ಮನೆಯಾಕೆಯ ಮುಂದೆ ಹಿಡಿದರು. ಆಕೆ ಅರಿಸಿನ, ಕುಂಕುಮ ಹಚ್ಚಿಕೊಂಡು, ಅದರೊಂದಿಗಿದ್ದ ಹೂ ತೆಗೆದುಕೊಂಡರು. ನಾನು ಓ, ಇದೀಗ ತಟ್ಟೆ ನನ್ನ ಮುಂದೆ ಬರುತ್ತೆ ಎಂದುಕೊಂಡು, ಇನ್ನೇನು ಕೈ ಹೀಗೆ ಚಾಚಬೇಕು... ಆದರೆ ನನ್ನ ಮುಂದೆ ಏನೂ ಬರಲೇ ಇಲ್ಲ, ಈಕೆ ಹಾಗೆಯೇ ಒಳಹೋಗಿಯಾಯಿತು. ಅದು ಎಷ್ಟು ಅನಿರೀಕ್ಷಿತವಾಗಿ ಕಣ್ಮುಚ್ಚಿ ತೆರೆಯುವಷ್ಟರಲ್ಲಿ ನಡೆಯಿತು ಎಂದರೆ, ಅರಿಸಿನ, ಕುಂಕುಮದ ನಿರೀಕ್ಷೆಯಲ್ಲಿದ್ದ ನನಗೆ ಒಂತರಾ ಪೆಚ್ಚೆನ್ನಿಸಿಬಿಟ್ಟಿತು. ಮರೆತರೇನೋ, ಈಗ ತರುತ್ತಾರೆ ಎಂದುಕೊಂಡೆ. ಒಳಹೋದವರು ಇನ್ನೊಂದು ತಟ್ಟೆಯೊಂದಿಗೇನೋ ಬಂದರು, ಆದರೆ ಅದರಲ್ಲಿ ಅರಿಸಿನ, ಕುಂಕುಮ ಇರಲಿಲ್ಲ, ಅಷ್ಟೆ (ಪಾಪ, ಸುಮಾ!). ನನಗೆ ಫಟಕ್ಕನೆ ಹೊಳೆದೇ ಹೋಯಿತು, ಈಕೆ ನನಗೆ ಯಾಕೆ ಅರಿಸಿನ, ಕುಂಕುಮ ಕೊಡಲಿಲ್ಲ ಎಂದು. ತಟ್ಟೆಯಲ್ಲಿ ಬಾಳೆಹಣ್ಣು, ರವಿಕೆ ಖಣ, ಕಜ್ಜಾಯದ ಪಾಕೀಟು ಇತ್ತು. ಅದನ್ನು ಇಬ್ಬರಿಗೂ ಕೊಟ್ಟರು ಎನ್ನಿ.

ನಮ್ಮ ಪರಿಚಯವಾದ ಕೆಲ ದಿನಗಳ ನಂತರ ಈಕೆ ವಿಚಾರಿಸಿಕೊಂಡಾಗ, ಸಹಜವಾಗಿಯೇ ನಾನು, ಮಗ ಇಬ್ಬರೇ ಇರೋದು; ಅವರು ನಮ್ಮ ಜೊತೆಗಿಲ್ಲ ಎಂದಿದ್ದೆ. ನನಗೆ ಇರುವ ಸತ್ಯವನ್ನು ಅದಿರುವ ಹಾಗೆ ಹೇಳುವುದರಲ್ಲಿ ಯಾವ ವಿಷಾದವೂ ಇಲ್ಲ, ಖುಷಿಯೂ ಇಲ್ಲ. ಅದೊಂದು ಸತ್ಯ ಅಷ್ಟೆ. ಹೀಗಾಗಿ ನನಗೆ ಕುಂಕುಮ ತೆಗೆದುಕೊಳ್ಳಿ ಎನ್ನಲಿಲ್ಲವೇನೋ ಎಂದುಕೊಂಡು ಸುಮ್ಮನಾದೆ. ಆದರೆ ಇನ್ನೇನು ಅರಿಸಿನ, ಕುಂಕುಮಕ್ಕೆ ಕೈ ಚಾಚಬೇಕು ಎಂದುಕೊಂಡು, ಅವರು ಕೊಡದೇ ಹಾಗೆಯೇ ಒಳಹೋಗಿದ್ದನ್ನು ಹೀಗೆ ಪೆಚ್ಚೆನ್ನಿಸಿಕೊಂಡು ನೋಡುತ್ತ ಕುಳಿತ ನನ್ನ ಚಿತ್ರ, ನನ್ನದಾಗಿಯೂ, ನನ್ನದಲ್ಲದೇ, ಬೇರೆಯವರದ್ದೂ ಆಗಿರುವ ಒಂದು ಚಿತ್ರವಾಗಿ, ಒಂದು ಪುಟ್ಟ ಆಘಾತವನ್ನು ಕಣ್ಣುಗಳಲ್ಲಿ ತುಂಬಿಕೊಂಡ ಮತ್ತಾವುದೋ ಹೆಂಗಸಿನ ಚಿತ್ರವಾಗಿ ಕಣ್ಣೊಳಗೆ ಕೂತಿತು.

ಹಾಗೆಂದು ನಾನೇನೋ ತುಂಬ ಬೇಜಾರಿನಲ್ಲಿ ಕೂತುಕೊಂಡೆ ಎಂದೇನಿಲ್ಲ. 'ಮಣ್ಣಾಂಗಟ್ಟಿ' ಮತ್ತು 'ಅಯ್ಯೋ, ಸಾಯ್ಲಿ ಅತ್ಲಾಗೆ' ಎಂಬ ನನ್ನ ಎಂದಿನ ಭಯಂಕರ ಸಮಾಧಾನ ಕೊಡುವ ಪದಗುಚ್ಛಗಳನ್ನು ಮನಸ್ಸಲ್ಲಿ ಹೇಳಿಕೊಂಡು ಮನೆಗೆ ಬಂದೆ (ಯಾವುದೇ ಸನ್ನಿವೇಶದಲ್ಲಿಯೂ, ಸ್ವತಃ ನನಗೇ ಸೇರಿದಂತೆ ಯಾರಿಗೂ ಬೈಯಬಹುದಾದ ಈ ಎರಡು ನಿರುಪದ್ರವಿ ಪದಗುಚ್ಛ ಕೊಡುವ ಬದುಕಿನ ಆಶ್ವಾಸನೆಯೇನು ಕಡಿಮೆಯೇ?). ಆಮೇಲೆ ಅರೆ, ಅವರಿಬ್ಬರೂ ಸಿಹಿ ಕೊಟ್ಟಾಗ ನಾನು ಕೊಡದಿದ್ದರೆ ಹೇಗೆ ಎಂದುಕೊಂಡು, ಅದೇ ಮಾಡಿದ್ದ ಪರಿಮಳದ ಸಣ್ಣಕ್ಕಿಯ ಬಿಸಿಬಿಸಿ ಪಾಯಸವನ್ನಾದರೂ ಕೊಟ್ಟು ಬರೋಣ ಎಂದು ಬಟ್ಟಲಿಗೆ ಹಾಕತೊಡಗಿದೆ. ಈಗ ಒಂದು ಸೀರೆಯುಟ್ಟು, (ಕಪಾಟಿನ ಮೂಲೆಯಲ್ಲೆಲ್ಲೋ ಇರುವ!) ಬಳೆಯನ್ನು ಹುಡುಕಿ